ತಜ್ಞವೈದ್ಯರೊಬ್ಬರು ಇಲ್ಲಿಗೆ ಬರುತ್ತಿದ್ದಾರೆ. ಅವರ ಅಭಿಪ್ರಾಯ ಕೇಳಿದ ಬಳಿಕ ಮುಂದಿನ ನಿರ್ಧಾರಕ್ಕೆ ಬರಬಹುದು. ಅಲ್ಲಿಯ ತನಕ ಏನನ್ನೂ ಹೇಳಲು ಸಾಧ್ಯವಿಲ್ಲ...'' ಎಂದರು.

ಆತ ಅಸಹಾಯಕ ನಗು ಬೀರಿದ್ದ. ಏಕೆಂದರೆ ಮುಂಬೈಗೆ ಮಗನನ್ನು ಕರೆದುಕೊಂಡು ಹೋಗುವುದಕ್ಕೆ, ಹೆಚ್ಚಿನ ಚಿಕಿತ್ಸೆ ಕೊಡಿಸುವುದಕ್ಕೆ ಆತನ ಬಳಿ ಹಣವೆಲ್ಲಿದೆ? ಇದುವರೆಗೆ ಸ್ವಂತ ಆಟೊ ಖರೀದಿಸಲೂ ಆತನಿಂದ ಸಾಧ್ಯವಾಗಿರಲಿಲ್ಲ. ದಿನವಿಡೀ ಆಟೊ ಓಡಿಸಿ, ಸಂಜೆ ಅಥವಾ ರಾತ್ರಿ ಅದರ ಮಾಲೀಕನಿಗೆ ಬಾಡಿಗೆ ನೀಡಿದ ನಂತರ ಆತನ ಕೈಯಲ್ಲಿ ಉಳಿಯುತ್ತಿದ್ದುದಾದರೂ ಎಷ್ಟು! ಹಾಗಾಗಿ ಆತ ರಾತ್ರಿಯ ಹೊತ್ತೂ ಆಟೊ ಓಡಿಸುತ್ತಿದ್ದ. ಪರಿಸ್ಥಿತಿ ಹೇಗೇ ಇದ್ದರೂ ಎಂಟರ ಹರೆಯದ ಮಗನನ್ನು ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಸುಮ್ಮನಾಗಲು ಸಾಧ್ಯವೇ! ಸಾಲ ಮಾಡಿಯಾದರೂ ಮಗನಿಗೆ ಒಳ್ಳೆಯ ಚಿಕಿತ್ಸೆ ನೀಡಬೇಕಾದುದು ತಂದೆಯ ಕರ್ತವ್ಯವಲ್ಲವೇ? ಹಾಗಾಗಿಯೇ ಆತ ಹಗಲಿರುಳೂ ದುಡಿಯತೊಡಗಿದ್ದ.

''ಕಾಂಕೇ ಚಲಿಯೇಗಾ?'' (ಕಾಂಕೇಗೆ ಬರುತ್ತೀಯಾ?)

ಒಬ್ಬ ವ್ಯಕ್ತಿ ಅಮನ್‌ನ ಆಟೊವನ್ನು ಒಂದು ಕೈಯಿಂದ ಹಿಡಿದು ಪ್ರಶ್ನಿಸಿದ್ದ. ಅದು ನಗರದ ಹೊರವಲಯದಲ್ಲಿರುವ ಸ್ಥಳ. ಬಹುಪಾಲು ಶ್ರೀಮಂತರೇ ತುಂಬಿಕೊಂಡಿರುವ ಪ್ರದೇಶ. ಅಷ್ಟು ದೂರ ಹೋಗಬೇಕಾ, ಹಿಂದಿರುಗಿ ಬರುವಾಗ ಬಾಡಿಗೆ ಸಿಗಬಹುದೇ? ಇತ್ಯಾದಿ ಅನೇಕ ವಿಷಯಗಳ ಬಗ್ಗೆ ಯೋಚಿಸಿ, ಸ್ವಲ್ಪ ಅಧಿಕ ಬಾಡಿಗೆಯನ್ನು ಕುದುರಿಸಿಕೊಂಡು ಆತ ಕಾಂಕೇಯತ್ತ ಆಟೊ ತಿರುಗಿಸಿದ್ದ. ಆಟೊಗೆ ಅಳವಡಿಸಲಾಗಿದ್ದ ಕನ್ನಡಿಯ ಮೂಲಕ ಪ್ರಯಾಣಿಕನತ್ತ ಒಂದು ನೋಟ ಬೀರಿದ. ಸ್ವಲ್ಪ ದಪ್ಪನೆಯ ಶರೀರದ, ಮಧ್ಯವಯಸ್ಸನ್ನು ದಾಟಿರುವ ವ್ಯಕ್ತಿ. ಆತನ ಮುಖದಲ್ಲಿ ಸ್ವಲ್ಪ ಗಾಬರಿ, ಆತಂಕ ಇದ್ದಂತಿತ್ತು. ಎರಡು ಮೂರು ಬ್ಯಾಗುಗಳನ್ನು ಪಕ್ಕದಲ್ಲಿ ಇಟ್ಟುಕೊಂಡಿದ್ದ. 'ಆತ ಹೇಗಿದ್ದರೆ ನನಗೇನು? ನನ್ನ ಬಾಡಿಗೆ ಬಂದರೆ ಸಾಕು!' ಎಂದು ತನಗೆ ತಾನೇ ಹೇಳಿಕೊಳ್ಳುತ್ತ ಅಮನ್ ಆಟೊ ಚಲಾಯಿಸುತ್ತಿದ್ದ. ಸುತ್ತಲೂ ಆಡರಿಕೊಂಡಿರುವ ಕತ್ತಲು; ರಸ್ತೆಯಲ್ಲಿ ವಾಹನ ಸಂಚಾರ ಬಹುತೇಕ ನಿಂತೇ ಹೋಗಿತ್ತು; ನಿರ್ಜನ ಎನ್ನಬಹುದಾದ ಪರಿಸರ; ಎದುರಿನಿಂದ ದಾಳಿ ಮಾಡುತ್ತಿದ್ದ ಮೈನಡುಗಿಸುವ ಚಳಿಗಾಳಿ; ಇವ್ಯಾವ ಚಿಂತೆಯಿಲ್ಲದೇ ಸಾಗುತ್ತಿದ್ದ ಆಟೊ. ಕಾಂಕೇ ಸಮೀಪಿಸಿತು; ಪ್ರಯಾಣಿಕ ಇಳಿದ; ಬಾಡಿಗೆಯನ್ನು ನೀಡಿದ; ಮನೆಯ ಮುಂದೆ ನಿಂತು ಕಾಲಿಂಗ್ ಬೆಲ್ ಒತ್ತಿದ; ಅಮನ್ ಆಟೊ ಹಿಂದಿರುಗಿಸಿದ.

ರಾತ್ರಿ ಹನ್ನೆರಡು ದಾಟಿತ್ತು. ಬೆಳಿಗ್ಗೆ ಲೆಕ್ಕಾಚಾರ ನೋಡಿಕೊಂಡರಾಯಿತು ಎಂದುಕೊಂಡು ನೇರವಾಗಿ ತನ್ನ ಮನೆಯತ್ತ ಆಟೊ ಓಡಿಸಿದ. ಆಟೊದಿಂದ ಇಳಿದು ಹಿಂಬದಿಯ ಸೀಟಿನತ್ತ ದೃಷ್ಟಿಹರಿಸಿದಾಗ ಆತನಿಗೆ ಆಶ್ಚರ್ಯ! ಈಗಷ್ಟೇ ಪ್ರಯಾಣಿಸಿದ್ದ ವ್ಯಕ್ತಿ ತನ್ನ ಒಂದು ಬ್ಯಾಗನ್ನು ಅಲ್ಲಿಯೇ ಬಿಟ್ಟುಹೋಗಿದ್ದ. ಅಪರಿಚಿತ ವ್ಯಕ್ತಿ ಬಿಟ್ಟುಹೋದ ಬ್ಯಾಗಿನಲ್ಲಿ ಏನಿದೆಯೋ? ಮೊದಲಿಗೆ ಆತ ಗಾಬರಿಯಾದ. ಆದರೆ, ಕಾಂಕೇಗೆ ಪ್ರಯಾಣ ಬೆಳೆಸಿದ್ದ ವ್ಯಕ್ತಿ ಗಾಬರಿಯಲ್ಲಿ, ಗಡಿಬಿಡಿಯಲ್ಲಿ ಮರೆತುಹೋಗಿರಬಹುದು ಎಂದುಕೊಂಡು ಅದನ್ನು ತೆಗೆದುಕೊಂಡು ಮನೆಗೆ ಬಂದು, ಬಾಗಿಲಿನ ಬೀಗ ತೆಗೆದ; ಪತ್ನಿ ಮಗನನ್ನು ನೋಡಿಕೊಳ್ಳುತ್ತ ಆಸ್ಪತ್ರೆಯಲ್ಲಿ ಇದ್ದಳು.

ಬ್ಯಾಗನ್ನು ಕುರ್ಚಿಯ ಮೇಲೆ ಬಿಸಾಕಿ, ಬಟ್ಟೆ ಬದಲಿಸಿದ ಆತ, ಅಡುಗೆ ಮನೆಗೆ ಹೋಗಿ ಪಾತ್ರೆಯಲ್ಲಿ ಉಳಿದಿದ್ದ ಅಲ್ಪಸ್ವಲ್ಪ ಆಹಾರ ತಿಂದ. ಹಾಸಿಗೆಯ ಮೇಲೆ ಬಿದ್ದುಕೊಂಡ. ಆತನ ಗಮನ ಬ್ಯಾಗ್‌ನತ್ತ ಹೋಯಿತು. ಅದಕ್ಕೊಂದು ಪುಟ್ಟ ಬೀಗ ಹಾಕಲಾಗಿತ್ತು. ಸ್ಕ್ರೂಡ್ರೈವರ್ ನೆರವಿನಿಂದ ಅದನ್ನು ಒಡೆದ. ಬ್ಯಾಗನ್ನು ತೆರೆದ; ಒಳಗಿದ್ದ ವಸ್ತುವನ್ನು ನೋಡಿ ಆತ ಗಾಬರಿಯಾದ! ಕೂಡಲೇ ಆತ ಮನೆಯ ಮುಖ್ಯ ಬಾಗಿಲಿನ ಅಗುಳಿಯನ್ನು ಇನ್ನಷ್ಟು ಭದ್ರಪಡಿಸಿದ; ಕಿಟಕಿಗಳ ಚಿಲಕಗಳನ್ನು